**ದಿನಾಂಕಃ 12.11.2019 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲು – ಶ್ರೀ ಎಸ್ ಆರ್ ಎ ವಕೀಲರಿಂದ</u>**

ದಾವಾ ಸರ್ವೆ ನಂ. 254 ರಲ್ಲಿ ಒಟ್ಟು 39 ಎಕರೆ 98 ಸೆಂಟಿರುತ್ತದೆ ಎಂದರೆ ಸರಿ. ಸದರಿ ಸ್ವತ್ತಿಗೆ ಲಗತ್ತಾಗಿ ಪೂರ್ವ ದಿಕ್ಕಿಗೆ ಒಂದು ಡ್ಯಾಂ ಇರುತ್ತದೆ ಎಂದರೆ ಸರಿ. ಆ ಪೈಕಿ 10 ಎಕರೆ 20 ಸೆಂಟ್ ಸುಬ್ಬರಾಯಶೆಟ್ಟಿ ಎಂಬುವವರಿಗೆ ಸೇರಿತ್ತು ಎಂದರೆ ಸರಿ. ಸದರಿ ಸ್ವತ್ತನ್ನು ಸದರಿ ಸುಬ್ಬರಾಯಶೆಟ್ಟಿ ಒಂದೇ ದಿವಸ ಮೂರು ಜನರಿಗೆ ಕ್ರಯ ಮಾಡಿರುತ್ತಾರೆಂದರೆ ಸರಿ. ಅದರಂತೆ ಪಳನಿಸ್ವಾಮಿಯ ಮಗ ಮುರುಗಸ್ವಾಮಿ ಎಂಬುವವರಿಗೆ 3 ಎಕರೆ 68 ಸೆಂಟ್ ಕ್ರಯವಾಗಿರುತ್ತದೆ ಎಂದರೆ ಸರಿ. ಅವರು ನನ್ನ ತಂದೆ ಎಂದರೆ ಸರಿ. ಅದರಂತೆ ಕುಪ್ಪುಸ್ವಾಮಿ ಹಾಗೂ ಕಂದಸ್ವಾಮಿ ಎಂಬುವವರಿಗೆ 2 ಎಕರೆ 84 ಸೆಂಟ್ ಜಂಟಿ ಕ್ರಯವಾಗಿರುತ್ತದೆ ಎಂದರೆ ಸರಿ. ಅದರಂತೆ 3 ಎಕರೆ 68 ಸೆಂಟ್ ಲಿಂಗೇಗೌಡ ಎಂಬುವವರಿಗೆ ಕ್ರಯವಾಗಿರುತ್ತದೆ ಎಂದರೆ ಸರಿ. ಸದರಿ ಕ್ರಯ ಪತ್ರದಂತೆ ಎಲ್ಲರೂ ತಮ್ಮ ಸ್ವತ್ತುಗಳ ಸ್ವಾಧೀನದಲ್ಲಿರುತ್ತೇವೆ ಎಂದರೆ ಸರಿ. ನನ್ನ ತಂದೆಯ ಹೆಸರಿಗಾಗಿರುವ ಕ್ರಯ ಸ್ವತ್ತಿನ ಮೇಲೆ ಬೇರೆ ಯಾರಿಗೂ ಹಕ್ಕು ಅಧಿಕಾರ ಇಲ್ಲ ಎಂದರೆ ಸರಿ. ಅದರಂತೆ ಲಿಂಗೇಗೌಡನ ಹೆಸರಿಗಾದ ಕ್ರಯ ಸ್ವತ್ತಿನ ಮೇಲೆ ನಮಗಾರಿಗೂ ಹಕ್ಕು ಅಧಿಕಾರ ಇಲ್ಲ ಎಂದರೆ ಸರಿ. ಸದರಿ ಲಿಂಗೇಗೌಡನ ಸ್ವತ್ತು ಸದರಿ 10 ಎಕರೆ 20 ಸೆಂಟಿನ ಉತ್ತರಭಾಗದಲ್ಲಿದ್ದು ಮಧ್ಯದ ಸ್ವತ್ತು ನನ್ನ ತಂದೆ ಪಾಲಿಗಿರುತ್ತದೆ ಹಾಗೂ ದಕ್ಷಿಣದ ಸ್ವತ್ತು ಸದರಿ ಕುಪ್ಪುಸ್ವಾಮಿ ಹಾಗೂ ಕಂದಸ್ವಾಮಿ ಎಂಬುವವರಿಗೆ ಸೇರಿದ್ದಾಗಿರುತ್ತದೆ. ಸದರಿ ಮೂರು ಜನರ ಸ್ವತ್ತುಗಳ ಮಧ್ಯದಲ್ಲಿ ಬೂದಬಾಳು ರಸ್ತೆ ಇರುತ್ತದೆ ಎಂದರೆ ಸರಿ. ಸದರಿ ಸ್ವತ್ತುಗಳ ಪೂರ್ವ ದಿಕ್ಕಿಗೆ ಡ್ಯಾಮಿನ ಹೆಚ್ಚುವರಿ ನೀರು ಹೋಗಲು ವ್ಯವಸ್ಥೆ ಇರುತ್ತದೆ ಎಂದರೆ ಸರಿ. ನನ್ನ ತಂದೆಯ ಜೀವಿತ ಕಾಲದಲ್ಲಿ ಅವರು ಕ್ರಯ ಪಡೆದ ಸ್ವತ್ತನ್ನು ಅಳತೆ ಮಾಡಿಸಿದ್ದರು. ಆ ಸಮಯದಲ್ಲಿ ನಮ್ಮ ಸ್ವತ್ತಿನ ಆಜುಬಾಜುದಾರರಿಗೆ ನೋಟಿಸ್ ನೀಡಿದ್ದರು. ಆ ಸಂಬಂಧ ದಾಖಲೆ ಇದೆಯೇ

ಎಂದರೆ ನನಗೆ ನೆನಪಿಲ್ಲ. ಸದರಿ ಅಳತೆ ಯಾವ ಸಾಲಿನಲ್ಲಿ ಮಾಡಿರುತ್ತಾರೆ ನನಗೆ ನೆನಪಿಲ್ಲ. ಆ ಸಮಯದಲ್ಲಿ ನಮ್ಮ ಸ್ವತ್ತನ್ನು ಬಾಜುದಾರರು ಯಾರು ಒತ್ತುವರಿ ಮಾಡಿರಲಿಲ್ಲ. ಕುಪ್ಪಸ್ವಾಮಿ ಹಾಗೂ ಕಂದಸ್ವಾಮಿ ತಮ್ಮ ಸ್ವತ್ತನ್ನು ಅಳತೆ ಮಾಡಿದ ಬಗ್ಗೆ ನನಗೆ ತಿಳಿದಿಲ್ಲ. ವಾದಿ ದಾವಾ ಸ್ವತ್ತನ್ನು ಒಮ್ಮೆ ಅಳತೆ ಮಾಡಿಸಿರುತ್ತಾರೆ. ಸದರಿ 10 ಎಕರೆ 20 ಸೆಂಟ್ ಜಮೀನನ್ನು ಅಳತೆ ಮಾಡಿಸಿ ಕ್ರಯ ಪತ್ರದ ಚೆಕ್ಕುಬಂದಿಗೊಳಪಟ್ಟಂತೆ ಹದ್ದುಬಸ್ತು ಮಾಡಲು ನನ್ನ ತಕರಾರು ಇರುವುದಿಲ್ಲ. ದಾವಾ ಸ್ವತ್ತನ್ನು ಅಳತೆ ಮಾಡುವ ಸಮಯದಲ್ಲಿ ನಾನು ಸ್ಥಳದಲ್ಲಿರಲಿಲ್ಲ. ನಮ್ಮ ಮನೆಯವರಿದ್ದರು. ದಾವಾ ಸ್ವತ್ತನ್ನು ಅಳತೆ ಮಾಡಲು ನನ್ನ ತಕರಾರು ಇದೆಯೇ ಎಂದರೆ ಸಾಕ್ಷಿ ನಾವು ಯಾವುದೇ ಸ್ವತ್ತಿನ ಒತ್ತುವರಿ ಮಾಡಿಲ್ಲವೆಂದು ನುಡಿಯುತ್ತಾರೆ. ಈ ದಾವೆಯಲ್ಲಿ ವಾದಿ ಏನು ಪರಿಹಾರ ಕೇಳಿರುತ್ತಾನೆ ನನಗೆ ತಿಳಿದಿರುತ್ತದೆ. ನ್ಯಾಯಾಲಯದ ಆಯುಕ್ತರು ದಾವಾ ಸ್ವತ್ತಿನ ಅಳತೆ ಮಾಡಲು ನನ್ನ ತಕರಾರಿರುವುದಿಲ್ಲ. ನಾನು ದಾವಾ ಬಿ ಶೆಡ್ಯೂಲ್ ಸ್ವತ್ತನ್ನು ಒತ್ತುವರಿ ಮಾಡಿರುತ್ತೇನೆಂದರೆ ಸರಿಯಲ್ಲ. ವಾದಿಗೆ ತೊಂದರೆ ನೀಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಓ

(ಟಿ. ಶ್ರೀಕಾಂತ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ. ಕೊಳ್ಳೇಗಾಲ.